# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1769 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 14.03.2022 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆ.ಎಸ್.ಓ.ಯು) ಮುಕ್ತ ಗಂಗೋತ್ರಿ ಮೈಸೂರು-2020 ಜುಲೈ ಆವೃತ್ತಿಯಲ್ಲಿ ಎಂ.ಬಿ.ಎ. ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಒಂದು ವರ್ಷದ (1st & 2nd sem) ಶೈಕ್ಷಣಿಕ ಅವಧಿಯು ಪೂರ್ಣಗೊಂಡಿರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ಕೋವಿಡ್ -19 ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಎಂಬಿಎ ಕೋರ್ಸ್‌ಗೆ ಸಂಬಂಧಿಸಿದ ಶೈಕ್ಷಣಿಕ ಚಟುವಟಿಕೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕೈಗೊಂಡ ಕ್ರಮದ ಬಗ್ಗೆ ಅನುಬಂಧದಲ್ಲಿ ಇಡಲಾಗಿದೆ. |
| (ಆ) | ಎಂ.ಬಿ.ಎ. ವಿದ್ಯಾರ್ಥಿಗಳ ಸೆಮಿಸ್ಟರ್ 2,3 ಮತ್ತು 4 ನ್ನು ಪೂರ್ಣಗೊಳಿಸಲು ಯಾವ ರೀತಿಯಾಗಿ ಸರ್ಕಾರ ಕ್ರಮಕೈಗೊಂಡಿದೆ. ವಿವರ ನೀಡುವುದು. | |

ಸಂಖ್ಯೆ: ಇಡಿ 13 ಯುಓವಿ 2022

(ಡಾ. ಅಶ್ವತ್ಥನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

## ಅನುಬಂಧ-1

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆ.ಎಸ್.ಓ.ಯು) ಮುಕ್ತ ಗಂಗೋತ್ರಿ, ಮೈಸೂರು-2020 ಜುಲೈ ಆವೃತ್ತಿಯಲ್ಲಿ ಎಂ.ಬಿ.ಎ. ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಒಂದು ವರ್ಷದ (1st & 2nd sem) ಶೈಕ್ಷಣಿಕ ಅವಧಿಯ ಕುರಿತು ವಿವರ:**

### ಪ್ರವೇಶಾತಿಗೆ ಸಂಬಂಧಿಸಿದಂತೆ:

- ಯುಜಿಸಿ (ಡೆಬ್)ಯ ನಿಯಮಾನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2020ರ ಜುಲೈ ಮತ್ತು ಜನವರಿ ಆವೃತ್ತಿಗಳಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಪ್ರವೇಶಾತಿ ಮಾಡಲಾಗಿರುತ್ತದೆ.

### ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ:

- ಜುಲೈ 2020ರ ಆವೃತ್ತಿಯ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 22.02.2021 ರಿಂದ 27.02.2021ರವರೆಗೆ Online ಸಂಪರ್ಕ ಕಾರ್ಯಕ್ರಮ (6 ದಿನ Online, 3 ದಿನ Offline) ನಡೆಸಲಾಗಿದೆ.
- ದಿನಾಂಕ: 28.02.2021 ರಿಂದ 15.03.2021 ರವರೆಗೆ Online ಸೆಮಿನಾರ್‌ಗಳನ್ನು ಈ ಕೆಳಕಂಡಂತೆ ನಡೆಸಲಾಗಿರುತ್ತದೆ;
    - ದಿನಾಂಕ: 28.02.2021 ರಿಂದ 02.03.2021ರವರೆಗೆ ಮೈಸೂರು, ಬೆಂಗಳೂರು, ಧಾರವಾಡ.
    - ದಿನಾಂಕ: 06.03.2021 ರಿಂದ 08.03.2021ರವರೆಗೆ ದಾವಣಗೆರೆ ಹಾಗೂ ಗುಲ್ಬರ್ಗಾ.
    - ದಿನಾಂಕ: 13.03.2021 ರಿಂದ 15.03.2021ರವರೆಗೆ ಮಂಗಳೂರು.

ಕೋವಿಡ್-19 ಸಮಸ್ಯೆಯಿಂದ ಕೆಲವು ವಿದ್ಯಾರ್ಥಿಗಳು ಸೆಮಿನಾರ್‌ಗೆ ಹಾಜರಾಗಿರದ ಕಾರಣ ಮತ್ತೊಮ್ಮೆ Online ಸೆಮಿನಾರ್‌ನ್ನು ದಿನಾಂಕ: 22.08.2021 ರಿಂದ 24.08.2021ರವರೆಗೆ ನಡೆಸಲಾಗಿದೆ.

ಜೂನ್ ಆವೃತ್ತಿಯ ವಿದ್ಯಾರ್ಥಿಗಳಿಗೆ Assignments ಸಲ್ಲಿಸಲು ದಿನಾಂಕ: 30.03.2021 ಕಡೆಯ ದಿನಾಂಕವಾಗಿರುತ್ತದೆ. ಕೋವಿಡ್-19 ಸಮಸ್ಯೆಯಿಂದ ಪರೀಕ್ಷೆಗಳನ್ನು ನಡೆಸದೇ ಆಂತರಿಕ ನಿಬಂಧನೆಗಳ ಆಧಾರದ ಮೇಲೆ Promote ಮಾಡಲಾಗಿರುತ್ತದೆ.

### ಪರೀಕ್ಷೆಗೆ ಸಂಬಂಧಿಸಿದಂತೆ,

- 2020-21ನೇ ಜುಲೈ ಆವೃತ್ತಿಯಲ್ಲಿ ಸ್ನಾತಕ/ಸ್ನಾತಕೋತ್ತರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಯುಜಿಸಿ ಮಾರ್ಗಸೂಚಿಗಳನ್ವಯ (MBA ಒಳಗೊಂಡಂತೆ) ಆಂತರಿಕ ಅಂಕಗಳ ಆಧಾರದ ಮೇಲೆ ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲಾಗಿರುತ್ತದೆ.
- 2nd semester ಗೆ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಎಂ.ಬಿ.ಎ. ವಿದ್ಯಾರ್ಥಿಗಳ ಸೆಮಿಸ್ಟರ್ 2, 3 ಮತ್ತು 4 ನ್ನು ಪೂರ್ಣಗೊಳಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

## ಪ್ರವೇಶಾತಿಗೆ ಸಂಬಂಧಿಸಿದಂತೆ

- 2020-21ರ ಜುಲೈ ಆವೃತ್ತಿಯಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಶಿಕ್ಷಣ ಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ 2021-22ರ ಜುಲೈ ಆವೃತ್ತಿಯಲ್ಲಿ ಅಂತಿಮ (ದ್ವಿತೀಯ ಸಾಲಿಗೆ) (3rd & 4th Sem) ಸಾಲಿಗೆ ಪ್ರವೇಶಾತಿ ನವೀಕರಣ (Renewal of admissions) ಮಾಡಲಾಗಿರುತ್ತದೆ.
- 2020-21ರ ಜನವರಿ ಆವೃತ್ತಿಯಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ 2021-22ರ ಜನವರಿ ಆವೃತ್ತಿಯಲ್ಲಿ ಅಂತಿಮ (ದ್ವಿತೀಯ ಸಾಲಿಗೆ) (3rd & 4th Sem) ಸಾಲಿಗೆ ಪ್ರವೇಶಾತಿ ನವೀಕರಣ (Renewal of admissions) ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.
- ಪ್ರಸ್ತುತ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗ ಕ್ರಮವಹಿಸುತ್ತಿದೆ.

## ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ

- 2ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 04.12.2021 ರಿಂದ 09.12.2021ರವರೆಗೆ Online ಸಂಪರ್ಕ ಕಾರ್ಯಕ್ರಮ ನಡೆಸಲಾಗಿದೆ. ದಿನಾಂಕ: 11.12.2021 ರಿಂದ 13.12.2021 ರವರೆಗೆ Offline ಸೆಮಿನಾರ್‌ಗಳನ್ನು ಈ ಕೆಳಕಂಡಂತೆ ನಡೆಸಲಾಗಿದೆ.
  - ➢ ದಿನಾಂಕ: 11.12.2021 ರಿಂದ 13.12.2021 ರವರೆಗೆ ಮೈಸೂರು, ಬೆಂಗಳೂರು, ಮಂಗಳೂರು, ದಾವಣಗೆರೆ.
  - ➢ ದಿನಾಂಕ: 21.12.2021 ರಿಂದ 23.12.2021ರವರೆಗೆ ಧಾರವಾಡ ಹಾಗೂ ಗುಲ್ಬರ್ಗಾ.

  ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Assignment ಸಲ್ಲಿಸಲು 27.12.2021 ಕಡೆಯ ದಿನಾಂಕವಾಗಿರುತ್ತದೆ.
- ಎಂ.ಬಿ.ಎ ಮೂರನೇ ಸೆಮಿಸ್ಟರ್ ಕೋವಿಡ್-19 ಸಮಸ್ಯೆಯಿಂದ ಪರೀಕ್ಷೆಗಳನ್ನು ನಡೆಸದೇ ಆಂತರಿಕ ನಿಬಂಧನೆಗಳ ಆಧಾರದ ಮೇಲೆ Promote ಮಾಡಲಾಗಿರುತ್ತದೆ.
- ಎಂ.ಬಿ.ಎ. ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 04.12.2021 ರಿಂದ 18.12.2021ರವರೆಗೆ Online ಸಂಪರ್ಕ ಕಾರ್ಯಕ್ರಮ ನಡೆಸಲಾಗಿದೆ.
  ದಿನಾಂಕ: 18.12.2021 ರಿಂದ 19.12.2021ರವರೆಗೆ Offline ಸೆಮಿನಾರ್ ಅನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಸಲಾಗಿದೆ.
- ಎಂ.ಬಿ.ಎ. ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Assignment ಸಲ್ಲಿಸಲು ದಿನಾಂಕ: 15.04.2021 ಕಡೆಯ ದಿನಾಂಕವಾಗಿರುತ್ತದೆ.

## ಪರೀಕ್ಷೆಗೆ ಸಂಬಂಧಿಸಿದಂತೆ

- 3ನೇ ಸೆಮಿಸ್ಟರ್‌ಗೆ ಯುಜಿಸಿ ಮಾರ್ಗಸೂಚಿಗಳನ್ವಯ ಆಂತರಿಕ ಅಂಕಗಳ ಆಧಾರದ ಮೇಲೆ ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲಾಗಿರುತ್ತದೆ.
- 4ನೇ ಸೆಮಿಸ್ಟರ್‌ಗೆ ಪರೀಕ್ಷೆ ನಡೆಸಲು ಪರೀಕ್ಷಾ ಶುಲ್ಕ ಪಾವತಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.